ಇಮ್ಮಡಿಯಷ್ಟು ವ್ಯಾಪಾರ ನಡೆಯುವುದೂ ಹೌದು. ಕಾರಣ ಸಂಕ್ರಾಂತಿಯ ದಿನ ಕೂಡ, ಶ್ರೀದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮಧ್ಯಾಹ್ನದ ಪ್ರಸಾದ (ಊಟ) ವಿತರಣೆ ಇಲ್ಲ. ಸೀತಾಪುರ ಗ್ರಾಮವಷ್ಟೇ ಅಲ್ಲದೆ ಅಕ್ಕಪಕ್ಕದ ಗ್ರಾಮಗಳಿಂದಲೂ ಬರುವ ಭಕ್ತಾದಿಗಳು ಕ್ಯೂನಲ್ಲಿ ನಿಂತು ದೇವರಿಗೆ ಹಣ್ಣು ಕಾಯಿ ಅರ್ಪಿಸಿ ಕೃತಕೃತ್ಯರಾದರೂ, ಮಧ್ಯಾಹ್ನದಲ್ಲಿ ದೇವರ ಪ್ರಸಾದ ಇಲ್ಲದೆ ಖಾಲಿ ಹೊಟ್ಟೆಯಲ್ಲೇ ಮರಳಿ ಹೋಗುವುದು ಜನರಿಗೆ ಅಭ್ಯಾಸವಾಗಿದ್ದರೂ ಅಂಥ ಸಂದರ್ಭದಲ್ಲಿ ಅವರ ಹಸಿವಿಗೆ ಶಮನ ನೀಡುವುದು ಕುಪ್ಪಣ್ಣಯ್ಯನವರ 'ದುರ್ಗಾಭವನ' .

ಕುಪ್ಪಣ್ಣಯ್ಯ ಇಂಥ ದಿನಗಳಲ್ಲಿ ಹೆಚ್ಚು ವ್ಯಾಪಾರ ಇದೆ ಎಂದು ತಿಂಡಿತೀರ್ಥಗಳ ಬೆಲೆಯನ್ನು ಎಂದಿಗಿಂತ ಹೆಚ್ಚು ಯಾವತ್ತೂ ಏರಿಸಿದವರಲ್ಲ. ಆಸುಪಾಸಿನ ಊರುಗಳಲ್ಲಿರುವ ಹೋಟೆಲಿನವರು ಆ ಊರ ಜಾತ್ರೆಯೋ, ಶಾಲಾ ವಾರ್ಷಿಕೋತ್ಸವವೋ ಇದ್ದಾಗ, ಎಂದಿಗಿಂತ ಒಂದೂವರೆ ಪಟ್ಟು ತಿಂಡಿತೀರ್ಥಗಳ ಬೆಲೆ ಏರಿಸುವುದಿತ್ತು. ಅದು ತಪ್ಪು ಎಂದು ಕುಪ್ಪಣ್ಣಯ್ಯ ಹೇಳುತ್ತಿದ್ದುದಲ್ಲದೇ, ಹೇಳಿದ ಹಾಗೆ ನಡೆದುಕೊಂಡೂ ಬಂದಿದ್ದರು. ಕುತೂಹಲ ಅಂದರೆ ಇಂಥ ಸಂಕ್ರಾಂತಿ ಅಥವಾ ಜಾತ್ರೆಯ ದಿನಗಳಲ್ಲಿ ಅವರು ಯಾವತ್ತೂ ತಮ್ಮ ಹೋಟೆಲಿನಲ್ಲಿ ಇರುವ ಇಡ್ಲಿ ಸಾಂಬಾರು, ತುಪ್ಪ ದೋಸೆ, ಮಸಾಲ ದೋಸೆ, ಕಡ್ಲೆಬಜಿಲು, ಉಪ್ಪಿಟ್ಟು, ಗೋಲಿಬಜೆಯೇ ಮೊದಲಾದವುಗಳ ಜೊತೆ ಸೇಮಿಗೆ ಹಾಲು, ಕಡುಬು ಮತ್ತು ಸ್ಪೆಷಲ್ ಸಾಂಬಾರುಗಳನ್ನು ಸಹ 'ವಿಶೇಷ' ಎಂಬ ಐಟಂ ಆಗಿ ಮಾಡುತ್ತಿದ್ದರು. ಅದೂ ಸಾಲದೆಂಬಂತೆ ಕ್ಷೀರ, ಬೂಂದಿ ಲಾಡೂ ಒಮ್ಮೊಮ್ಮೆ ಇರುತ್ತಿತ್ತು. ಈ ಎಲ್ಲಾ ಕಾರಣದಿಂದ ಮತ್ತು ಸುತ್ತುಮುತ್ತಲ ಊರುಗಳಲ್ಲಿ ಇಷ್ಟು ಚೆನ್ನಾಗಿ ತಿಂಡಿತೀರ್ಥಗಳು ಅಲಭ್ಯ ಎಂಬ ಮಾತೂ ಇರುವುದರಿಂದ ಸಂಕ್ರಾಂತಿಯ ದಿನ ಅವರಿಗೆ ಭರ್ಜರಿ ವ್ಯಾಪಾರವೇ ನಡೆಯುತ್ತಿತ್ತು.

ಕುಪ್ಪಣ್ಣಯ್ಯನವರ ಹೋಟೆಲಿನಲ್ಲಿ ಇದ್ದದ್ದು ಕೇವಲ ಆರು ಟೇಬಲ್. ಒಂದು ಟೇಬಲಿನಲ್ಲಿ ನಾಲ್ಕು ಮಂದಿ ಎಂದುಕೊಂಡರೆ, ಆರು ಟೇಬಲಿನಲ್ಲಿ ಒಟ್ಟು ಇಪ್ಪತ್ತನಾಲ್ಕು ಜನ ಒಮ್ಮೆಲೆ ಕುಳಿತು ತಿಂಡಿ ತಿನ್ನಬಹುದು. ಆದರೆ ಒಮ್ಮೆಲೇ ಇನ್ನೂ ಅಷ್ಟೂ ಜನ ಬಂದರೆ ನಿಭಾಯಿಸುವುದು ಕಷ್ಟ, ಅಂದರೆ ಗ್ರಾಹಕರು ಹತ್ತೋ ಹದಿನೈದೋ ನಿಮಿಷ ಕಾಯಬೇಕು. ಕುಪ್ಪಣ್ಣಯ್ಯನಿಗೆ ಆಗ ಸ್ವಲ್ಪ ಮುಜುಗರ-ಇವರಿಗೆ ಆಸನ ವ್ಯವಸ್ಥೆ ಮಾಡಲಾಗಲಿಲ್ಲವಲ್ಲ ಎಂದು ಅನಿಸುತ್ತಿದ್ದರೂ, ಗ್ರಾಹಕರೇ ಇದು ಅನಿವಾರ್ಯ ಎಂದು ಒಪ್ಪಿಕೊಂಡಿರುವಾಗ, ತಾನೇಕೆ ಚಿಂತಿಸಬೇಕು ಎಂದು ಸುಮ್ಮನಿದ್ದರು. ಇನ್ನೂ ನಾಲ್ಕು ಟೇಬಲ್ ಹಾಕಬಹುದಲ್ಲ ಎಂದು ಅವರಿಗೆ ಅವರ ಆತ್ಮೀಯರು ಸಲಹೆ ಕೊಟ್ಟಾಗ, ಅವರು 'ಈ ಒಂದು ದಿನಕ್ಕಾಗಿ ಯಾಕೆ ಹೆಚ್ಚು ಇನ್‌ವೆಸ್ಟ್ ಮಾಡಬೇಕು? ಜನ ಒಪ್ಪಿದ್ದಾರಲ್ಲ ನನ್ನನ್ನು?' ಎಂದು ಮುಗುಳ್ನಗುತ್ತಿದ್ದರು. ಆದರೆ ಯಾರೂ ಕುಪ್ಪಣ್ಣಯ್ಯನವರನ್ನು 'ಜುಗ್ಗ' (ಜಿಪುಣ) ಎಂದದ್ದಿಲ್ಲ. ಧಾರಾಳಿ ಎಂದೇ ಕರೆಯುತ್ತಿದ್ದರು ಮತ್ತು ಅವರೂ ಹಾಗೇ ಇದ್ದರು.

ಇನ್ನೇನು ಮಧ್ಯಾಹ್ನ ಒಂದೂವರೆ ಗಂಟೆ ಆಯಿತು ಎನ್ನುವಾಗ 'ದುರ್ಗಾಭವನ'ದಲ್ಲಿದ್ದ ಬಹುತೇಕ ಮಂದಿ ಉಪಾಹಾರ ತೀರಿಸಿ ಹೊರಟು ಹೋಗಿ, ಕೇವಲ ನಾಲ್ಕೈದು ಮಂದಿ ಮಾತ್ರ ಉಳಿದಿದ್ದಾರೆ ಎನ್ನುವ ಹೊತ್ತಿನಲ್ಲಿ, ಬೈಲುಗದ್ದೆ ಮಾಂಕು ಮಣ ಭಾರದ ಒಂದು ಗೋಣಿ ಚೀಲವನ್ನು ತಲೆಯ ಮೇಲಿಟ್ಟುಕೊಂಡು ಹೋಟೆಲಿನ ಜಗಲಿಗೆ ಬಂದು ಅಲ್ಲಿ ಅದನ್ನು 'ಹೊತ್ತು ಹಾಕಿ' ದೊಡ್ಡದಾಗಿ ನಿಟ್ಟುಸಿರು ಬಿಟ್ಟ. ಆ ಹೊತ್ತಿನಲ್ಲಿ ಗಲ್ಲದಲ್ಲಿ ಇದ್ದ ಕುಪ್ಪಣ್ಣಯ್ಯ 'ಓ ಮಾಂಕು, ಇದೇನು ಸಂಕ್ರಾಂತಿಯ ದಿನ ದೇವಾಸ್ಥಾನಕ್ಕೆ ಬಾರದೆ, ಅದೇನೂ ಪೇಟೆಗೆ ಸಾಗಹಾಕಲಿಕ್ಕೆ ಹೊರಟ ಹಾಗೆ ಇದೆಯಲ್ಲಾ?' ಎಂದು ಪ್ರಶ್ನಿಸಿ, ಹೋಟೆಲು ಮಾಣಿ ಗೋವಿಂದಯ್ಯನನ್ನು ಕರೆದು 'ಮಾಂಕುವಿಗೆ ಮೊದಲು ಒಂದು ತಂಬಿಗೆ ನೀರು ಕೊಡು, ಆಮೇಲೆ ಏನು ಬೇಕು? ಎಂದು ವಿಚಾರಿಸು' ಎಂದರು.

ಮಾಂಕು ಮುಖ ಮತ್ತು ತನ್ನ ಎರಡು ಭುಜಗಳಲ್ಲಿ ತುಂತುರುಗಟ್ಟಿ ಇದ್ದ ಬೆವರನ್ನು - ತಲೆಯಲ್ಲಿ ಇದ್ದ ಮುಂಡಾಸನ್ನು ಬಿಚ್ಚಿ - ಅದರಿಂದ ಒರಸಿಕೊಂಡು ಏನೂ ಆಡದೆ 'ದುರ್ಗಾಭವನ'ದ ಒಳಗೆ ಬಂದು ಒಂದು ಟೇಬಲಿನ ಬಳಿ ಕುಳಿತ. ಅವನಿಗೆ ಕುಪ್ಪಣ್ಣಯ್ಯನ ಪ್ರಶ್ನೆಗೆ ಉತ್ತರಿಸುವ ಮನಸ್ಸಿದ್ದರೂ ಬಹಳ ದೂರದಿಂದ - ಅಂದರೆ ಸುಮಾರು ಒಂದೂವರೆ ಕಿ.ಮೀ. ಯಷ್ಟು ದೂರದಿಂದ ಬಂದದ್ದರಿಂದ ಆತ ಬಳಲಿ